ಓಎಸ್ 289/2022

ಪಿಡಬ್ಲ್ಯೂ 2

**ಸಾಕ್ಷಿಯು ದಿಃ 02.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ**

ಮಲಿಯಪ್ಪ ರವರು 1ನೇ ವಾದಿಯ ತಂದೆ ಮದ್ದಪ್ಪ ರವರ ತಂದೆಯಾಗಿರುತ್ತಾರೆ ಎಂದರೆ ಸರಿ. ಸದರಿ ಮಲಿಯಪ್ಪ ರವರಿಗೆ ಒಟ್ಟು 3 ಜನ ಮಕ್ಕಳು, ಅವರಗಳೆಂದರೆ ಸಿದ್ದಮ್ಮ, ದೇವಪ್ಪ ಮತ್ತು ಮುದ್ದಪ್ಪ ಆಗಿರುತ್ತಾರೆ. ಸದರಿ ಸಿದ್ದಮ್ಮ, ದೇವಪ್ಪ ಮತ್ತು ಮುದ್ದಪ್ಪ ರವರ ನಡುವೆ ಯಾವಾಗ ವಿಭಾಗವಾಗಿದೆ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ, ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಯಾವ ಇಸವಿ ಅಥವಾ ದಿನಾಂಕದಂದು ವಿಭಾಗವಾಗಿದೆ ಎಂದು ತಿಳಿಸಿಲ್ಲ ಎಂದರೆ ಸಾಕ್ಷಿಯು ಪಾಲು ಪರಿಕತ್ ಮಾಡಿಕೊಂಡಿದ್ದು ಅದರ ಪ್ರತಿ ನನಗೆ ಸಿಕ್ಕಿಲ್ಲ ಆದರೆ ವಿಭಾಗದಂತೆ ಎಂ.ಆರ್. ಗಳು ಬದಲಾಗಿರುತ್ತವೆ ಎಂದು ನುಡಿಯುತ್ತಾರೆ. ವಿಭಾಗದಂತೆ ಯಾರು ಯಾರಿಗೆ ಎಷ್ಟು ಆಸ್ತಿ ಹಿಸ್ಸೆ ಬಂದಿದೆ ಎಂದರೆ ಸಾಕ್ಷಿಯು ಸರ್ವೇ ನಂಬರ್ 212 ರಲ್ಲಿ 2 ಎಕರೆ 10 ಗುಂಟೆ ದೇವಪ್ಪ ರವರಿಗೆ, ಸರ್ವೇ ನಂಬರ್ 214 ರಲ್ಲಿ 4 ಎಕರೆ 12 ಗುಂಟೆ ಪೈಕಿ 3 ಎಕರೆ 12 ಗುಂಟೆ ಮುದ್ದಪ್ಪ ರವರಿಗೆ ಮತ್ತು 1 ಎಕರೆ ದೇವಪ್ಪ ರವರಿಗೆ, ಸರ್ವೇ ನಂಬರ್ 295 ರಲ್ಲಿ 6 ಎಕರೆ 4 ಗುಂಟೆ ಪೈಕಿ 3 ಎಕರೆ ಮುದ್ದಪ್ಪ ರವರಿಗೆ ಮತ್ತು 3 ಎಕರೆ 4 ಗುಂಟೆ ದೇವಪ್ಪ ರವರಿಗೆ ಹಿಸ್ಸೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಭಾಗವು 1950, 1960, 1970 ಯಾವ ವರ್ಷದಲ್ಲಿ ಆಗಿದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

2. ಮಲಿಯಪ್ಪ ರವರ ಮಕ್ಕಳಾದ ಸಿದ್ದಮ್ಮ, ದೇವಪ್ಪ ಮತ್ತು ಮುದ್ದಪ್ಪ ರವರಿಗೆ 1968-69 ರಲ್ಲಿ ಎಲ್ಲ ಪಿತ್ರಾರ್ಜಿತ ಆಸ್ತಿಗಳು ಮೌಖಿಕವಾಗಿ ವಿಭಾಗವಾಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ವಿಭಾಗದಲ್ಲಿ ಸರ್ವೇ ನಂಬರ್ 165 ರಲ್ಲಿ 1 ಎಕರೆ ವಿಸ್ತೀರ್ಣದ ಆಸ್ತಿ ಸಿದ್ದಮ್ಮ ರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಂತೆ ಸರ್ವೇ

ನಂಬರ್ 214 ರಲ್ಲಿ 4 ಎಕರೆ 12 ಗುಂಟೆ ಆಸ್ತಿಯನ್ನು ದೇವಪ್ಪ ರವರ ಹಿಸ್ಸೆಗೆ ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 295 ರಲ್ಲಿ 6 ಎಕರೆ ಪೈಕಿ 3 ಎಕರೆ ದೇವಪ್ಪ ರವರಿಗೆ ಮತ್ತು ಉಳಿಕೆ 3 ಎಕರೆ ಮುದ್ದಪ್ಪ ರವರಿಗೆ ಹಿಸ್ಸೆ ಹೋಗಿರುತ್ತದೆ ಎಂದರೆ ಸಾಕ್ಷಿಯು, ದೇವಪ್ಪ ರವರಿಗೆ 3 ಎಕರೆ 4 ಗುಂಟೆ ಮತ್ತು ಮುದ್ದಪ್ಪ ರವರಿಗೆ 3 ಎಕರೆ ಹಿಸ್ಸೆ ಹೋಗಿದೆ ಎಂದು ನುಡಿಯುತ್ತಾರೆ. ಸದರಿ ದೇವಪ್ಪ ಎಂದರೆ ಪ್ರತಿವಾದಿಯ ತಂದೆಯಾಗಿರುತ್ತಾರೆ ಎಂದರೆ ಸರಿ. ಮೌಖಿಕ ವಿಭಾಗದಂತೆ ದಾವ ಆಸ್ತಿಯ ಖಾತೆಯು ಪ್ರತಿವಾದಿಯ ತಂದೆ ದೇವಪ್ಪ ರವರಿಗೆ ಆರ್.ಆರ್.ಸಂಖ್ಯೆ 435 ರಂತೆ ಖಾತೆಯಾಗಿದೆ ಎಂದರೆ ಸುಳ್ಳು. ದಾವ ಆಸ್ತಿಯು ಖಾತೆಯಾದ ಮೇಲೆ ಪ್ರತಿವಾದಿಯ ತಂದೆ ದೇವಪ್ಪ ರವರು ದಾವ ಆಸ್ತಿಯ ಮೇಲೆ ಬ್ಯಾಂಕ್ ನಿಂದ ಸಾಲ ಪಡೆದುಕೊಂಡಿದ್ದಾರೆ ಮತ್ತು ಬೇರೆ ಖಾಸಗಿ ವ್ಯಕ್ತಿಗಳಿಗೆ ನೋಂದಾಯಿತ ಭೋಗ್ಯ ಸಹ ಮಾಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವಿಭಾಗಕ್ಕಿಂತ ಮುಂಚೆ ಮಾಡಿರಬಹುದು, ವಿಭಾಗವಾದ ನಂತರ ಮಾಡಿಲ್ಲ ಎಂದು ನುಡಿಯುತ್ತಾರೆ.

3. ವಿಭಾಗವಾದ ನಂತರ 1970 ರಿಂದ 1984 ರವರಗೂ ದಾವ ಆಸ್ತಿಯ ಖಾತೆ ಪ್ರತಿವಾದಿಯ ತಂದೆ ದೇವಪ್ಪ ರವರ ಹೆಸರಿನಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿಯು ದಾವ ಆಸ್ತಿಯ ಅನುಭವ ಮುದ್ದಪ್ಪ ರವರಲ್ಲಿ ಇತ್ತು, 1984 ರಲ್ಲಿ ಮುದ್ದಪ್ಪ ರವರು ಮೌಖಿಕ ವಿಭಾಗದಂತೆ ದಾವ ಆಸ್ತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1984-85 ರಲ್ಲಿ ಪ್ರತಿವಾದಿಯ ತಂದೆ ದೇವಪ್ಪ ರವರ ಹೆಸರಿನಲ್ಲಿ ಇದ್ದ ದಾವ ಆಸ್ತಿಯ ಖಾತೆಯನ್ನು ಅವರಿಗೆ ತಿಳಿಯದಂತೆ ಮುದ್ದಪ್ಪ ರವರು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ನಂತರ ಮುದ್ದಪ್ಪ ರವರು ಮೃತಪಟ್ಟ ಮೇಲೆ 1ನೇ ವಾದಿಯು ದಾವ ಆಸ್ತಿಯ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮುದ್ದಪ್ಪ ಇದ್ದಾಗಲೇ 1ನೇ ವಾದಿಯ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು 1ನೇ ವಾದಿಯ ಹೆಸರಿನಲ್ಲಿರುವ ದಾವ ಆಸ್ತಿಯ ಖಾತೆಯನ್ನು ಪ್ರಶ್ನಿಸಿ ಕಂದಾಯ ಅಧಿಕಾರಿಗಳ ಮುಂದೆ 2009-10ನೇ ಸಾಲಿನಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಆಗಲೇ ಅಕ್ರಮವಾಗಿ ನಮ್ಮ ಆಸ್ತಿಯನ್ನು ಸೇರಿಸಿ ಪ್ರತಿವಾದಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ

ಪ್ರಕಾರವಾಗಿ ತಹಶೀಲ್ದಾರ್ ರವರು 1ನೇ ವಾದಿ ಮತ್ತು ಮುದ್ದಪ್ಪ ರವರ ಹೆಸರಿನಲ್ಲಿದ್ದ ಖಾತೆಯನ್ನು ರದ್ದುಪಡಿಸಿ, ಪ್ರತಿವಾದಿಯ ತಂದೆ ದೇವಪ್ಪ ರವರ ಹೆಸರಿಗೆ ದಾವ ಆಸ್ತಿಯ ಖಾತೆ ವರ್ಗಾವಣೆ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಆದೇಶವನ್ನು ಪ್ರಶ್ನಿಸಿ ನಾವು ಉಪ ವಿಭಾಗಾಧಿಕಾರಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದೇವು ಎಂದು ನುಡಿಯುತ್ತಾರೆ. ಸದರಿ ಉಪ ವಿಭಾಗಾಧಿಕಾರಗಳು ಪುರಸ್ಕರಿಸಿದ ಮೇಲ್ಮನವಿಯ ವಿರುದ್ಧ ಪ್ರತಿವಾದಿಯು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಜಿಲ್ಲಾಧಿಕಾರಿಗಳು ತಹಶೀಲ್ದಾರ್ ರವರ ಆದೇಶ ಸರಿಯಾಗಿದೆ ಎಂದು ಹೇಳಿ ಉಪ ವಿಭಾಗಾಧಿಕಾರಗಳ ಆದೇಶವನ್ನು ತಳ್ಳಿ ಹಾಕಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದಕ್ಕಾಗಿಯೇ ಈ ದಾವೆ ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ.

4. ನಿಪಿ 2 ರಲ್ಲಿ ನಮೂದಿಸಿರುವಂತೆ ದೇವಪ್ಪ ರವರು ದಾವ ಆಸ್ತಿಯನ್ನು 1960ನೇ ಇಸವಿಯಲ್ಲಿ ಆಧಾರ ಮಾಡಿದ್ದಾರೆ ಎಂದರೆ ಸಾಕ್ಷಿಯು 1968-69 ರಲ್ಲಿ ಮೌಖಿಕ ವಿಭಾಗವಾಗಿದೆ ಎಂದು ನಿವೇ ಸೂಚಿಸಿರುವುದರಿಂದ ವಿಭಾಗಕ್ಕಿಂತ ಮುಂಚೆ ಆಧಾರ ಮಾಡಿರಬಹುದು ಎಂದು ನುಡಿಯುತ್ತಾರೆ. ನಿಪಿ 3 ರಲ್ಲಿ ಯಾವುದೇ ದಿನಾಂಕ ಮತ್ತು ವರ್ಷ ನಮೂದಾಗಿಲ್ಲ ಎಂದರೆ ಸರಿ. ನಿಪಿ 4 ದಾಖಲೆಯು ಸರ್ವೇ ನಂಬರ್ 295 ಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ 7 ರಂತೆ ಪ್ರತಿವಾದಿಗಳ ತಂದೆಗೆ ತಿಳಿಯದಂತೆ ಮುದ್ದಪ್ಪ ರವರು ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 10 ರಂತೆ 1970ನೇ ಇಸವಿಯಲ್ಲಿ ದಾವ ಆಸ್ತಿ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿ. ನಿಪಿ 12 ರ ಪಹಣಿಯ 10ನೇ ಕಾಲಂನಲ್ಲಿ ನಮೂದಾಗಿರುವ ಎಂ.ಆರ್ 75/80-81 ನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ 28 ರಿಂದ 44 ದಾಖಲೆಗಳು 1980 ರ ನಂತರದ ದಾಖಲೆಗಳು ಎಂದರೆ ಸರಿ.

5. ದಾವ ಆಸ್ತಿಯಲ್ಲಿ ಪ್ರತಿವಾದಿಯು ವ್ಯವಸಾಯ ಮಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ಪ್ರಸ್ತುತ ದಾವ ಆಸ್ತಿಯಲ್ಲಿ ಏನು ಬೆಳೆ ಇದೆ ಹಾಗೂ ಯಾರು ಉಳುಮೆ

ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ದಾವ ಆಸ್ತಿಯು ನಮ್ಮ ಅನುಭವದಲ್ಲಿಯೇ ಇದೆ ಈ ವರ್ಷ ನಾವು ಏನು ಬೆಳೆ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ಪ್ರತಿವಾದಿಯು ಈ ವರ್ಷ ಜೋಳದ ಬೆಳೆ ಬೆಳೆದಿದ್ದಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕ ಅಧಿಕಾರ ಇಲ್ಲದಿದ್ದರೂ ಸಹ ಪ್ರತಿವಾದಿಗೆ ಪದೇ ಪದೇ ತೊಂದರೆ ಕೊಡಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ